

# ಸಂಜನಾ

## ಪಾತ್ರಗಳ ಆಯ್ಕೆಯ ಮರುವ್ಯಾಖ್ಯಾನ

'ಬ್ಯಾಂಗಲ್ ಬಂಗಾರಿ' ಹಾಡಿಗೆ ಹೆಜ್ಜೆ ಹಾಕಿ ಪ್ರೇಕ್ಷಕರನ್ನು ಮೋಡಿ ಮಾಡಿದ್ದ ನಟಿ ಸಂಜನಾ ಆನಂದ್ ಅಭಿನಯದ 'ಹಯಗ್ರೀವ' ಸಿನಿಮಾ ಈಚೆಗೆ ಬಿಡುಗಡೆ ಕಂಡಿದೆ. ಈ ಸಿನಿಮಾದಲ್ಲಿ ವೈದ್ಯೆಯಾಗಿ ಬಣ್ಣ ಹಚ್ಚಿರುವ ಸಂಜನಾ, ಆ ಪಾತ್ರ ತಮ್ಮ ಪಾಲಿಗೆ ವಿಶೇಷ ಅನುಭವ ದಕ್ಕಿಸಿಕೊಟ್ಟಿದ್ದಾಗಿ ತಿಳಿಸಿದ್ದಾರೆ.

ಇದರೊಂದಿಗೆ, ತೆರೆ ಮೇಲೆ ತಾವು ಹೇಗೆ ಕಾಣಿಸಿಕೊಳ್ಳಬೇಕೆಂಬ ಅಂಶವನ್ನು ಮರುವ್ಯಾಖ್ಯಾನಿಸಿಕೊಳ್ಳಲು ಈ ಸಿನಿಮಾ ತಮಗೆ ಅವಕಾಶ ಮಾಡಿಕೊಟ್ಟಿರುವುದಾಗಿಯೂ ತಿಳಿಸಿದ್ದಾರೆ. ಸದ್ಯ, ಪಾತ್ರಗಳ ವಿಷಯದಲ್ಲಿ ತಮ್ಮ ಆಯ್ಕೆಯನ್ನು ಹರಿತಗೊಳಿಸಿಕೊಂಡಿರುವುದಾಗಿ ಹೇಳಿದ್ದಾರೆ.

'ಸಿನಿಮಾದಲ್ಲಿ ಬಂದು ಹೋಗುವಂಥ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದು ರಿಸ್ಕಿ ಎಂದೆನಿಸುತ್ತಿದೆ. ಹೀಗಾಗಿ ಪಾತ್ರಗಳ ಆಯ್ಕೆ ಕುರಿತು ಬಹಳಷ್ಟು ಆಲೋಚನೆಯನ್ನು ಮಾಡುತ್ತೇನೆ. ಪ್ರಭಾವ ಬೀರುವಂಥ ಪಾತ್ರಗಳನ್ನು ಬಯಸುತ್ತೇನೆ. ಅದು ಸದ್ಯದ ಆದ್ಯತೆಯಾಗಿದೆ' ಎಂದಿದ್ದಾರೆ.

'ಹಯಗ್ರೀವ' ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತು ಹೊರಳಿಸಿ, 'ಪ್ರೇಮಕಥೆಯಲ್ಲಿ ಒಂದು ಸ್ಥಳವನ್ನು ತುಂಬಲು ಬಂದು ಹೋಗುವಂಥ ಪಾತ್ರ ಇದಲ್ಲ. ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದೇನೆ. ನನಗೆ ಬಹಳ ಸಂತೋಷ ನೀಡಿದ ಪಾತ್ರವಿದು. ಪ್ರತಿ ಸಿನಿಮಾ ಕೂಡ ಹೊಸ ಅನುಭವ ನೀಡುತ್ತದೆ. ಪ್ರತಿ ನಟರೊಂದಿಗೆ ನಟಿಸುವುದು ಕೂಡ ಅನನ್ಯ ಅನುಭವ' ಎಂದು ವಿವರಿಸಿದ್ದಾರೆ.

ವಿಕ್ರಂ ರವಿಚಂದ್ರನ್ ಜೊತೆಗೆ 'ಮುಧೋಳ್' ಸಿನಿಮಾದಲ್ಲಿ ಹಾಗೂ ಶಿವರಾಜ್‌ಕುಮಾರ್ ಅವರೊಂದಿಗೆ 'ಬೇಲ್' ಸಿನಿಮಾದಲ್ಲಿ ಸಂಜನಾ ತೊಡಗಿಕೊಂಡಿದ್ದು, ವಿಭಿನ್ನತೆ ಹಾಗೂ ಹೊಸ ಹೊಸ ಅವಕಾಶಗಳಿಂದ ತಮ್ಮ ಜೀವನದ ಈ ಹಂತ ಉತ್ಸುಕತೆಯಿಂದ ತುಂಬಿರುವುದಾಗಿ ಹೇಳಿಕೊಂಡಿದ್ದಾರೆ. ■

# 'ಪಾಕೆಟ್ ನಾವೆಲ್'ನಲ್ಲಿ ರಾಜ್ ಮೊಹರು

'ನಾನು ಸಿನಿಮಾದ ಪಾತ್ರ ವರ್ಗದಲ್ಲಿದ್ದೇನೆ ಎಂದಾಗ, ಅದರಲ್ಲಿ ಖಳನಾಯಕನಾಗಿರುತ್ತೇನೆ ಎಂದು ಜನರು ಊಹೆ ಮಾಡಿಕೊಳ್ಳುತ್ತಾರೆ. ಈ ಸಿನಿಮಾದಲ್ಲಿ ನಾನು ಖಳನಾಯಕ ಅಲ್ಲ. ಆದರೆ ತುಂಬಾ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ' ಎಂದಿದ್ದಾರೆ ನಟ, ನಿರ್ದೇಶಕ ರಾಜ್ ಬಿ. ಶೆಟ್ಟಿ.

ತಮಿಳಿನಲ್ಲಿ ಮೊದಲ ಬಾರಿಗೆ ರಾಜ್, 'ಪಾಕೆಟ್ ನಾವೆಲ್' ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇದು ಭಾಷೆ ಅಥವಾ ಮಾರುಕಟ್ಟೆ ವಿಸ್ತರಣೆ ವಿಷಯದ ಹೊರತಾಗಿ, ಅಭಿಮಾನದ ಕಾರಣಕ್ಕೆ ಎಂದು ಹೇಳಿಕೊಂಡಿದ್ದಾರೆ.

'ನಾನು ತ್ಯಾಗರಾಜನ್ ಕುಮಾರರಾಜ ಅವರ ಅಭಿಮಾನಿ. ಅವರ ಮೊದಲ ಸಿನಿಮಾ 'ಅರಣ್ಯ ಕಾಂಡಂ'ನಿಂದ ಹಿಡಿದು 'ಸೂಪರ್ ಡಿಲಕ್ಸ್'ವರೆಗಿನ ಸಿನಿಮಾಗಳನ್ನು ನೋಡಿ ವಿಸ್ಮಿತನಾಗಿದ್ದೇನೆ. ಅವರೊಂದಿಗೆ ಕೆಲಸ ಮಾಡಬೇಕು ಎಂಬ ಆಸೆ ಬಹಳ ದಿನಗಳಿಂದ ಇತ್ತು' ಎಂದು ತಮ್ಮ ಮನದಾಸೆಯನ್ನು ಹೊರ ಹಾಕಿದ್ದಾರೆ.

'ಪಾಕೆಟ್ ನಾವೆಲ್' ಕುರಿತು ತಮ್ಮಲ್ಲಿ ಏಕಿಷ್ಟು ಉತ್ಸಾಹ ತುಂಬಿತ್ತು ಎನ್ನುವುದಕ್ಕೆ ಕಾರಣವನ್ನೂ ನೀಡಿದ್ದಾರೆ. ಅಚ್ಚುಮೆಚ್ಚಿನ ನಟರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು, ಈ ಸಿನಿಮಾ ಒಪ್ಪಲು ಕಾರಣ ಎಂದಿದ್ದಾರೆ. 'ನಾನು ವಿಜಯ್ ಸೇತುಪತಿ, ಕಿಶೋರ್ ಅವರೊಂದಿಗೆ ಕೆಲಸ ಮಾಡಬೇಕು ಎಂದುಕೊಂಡಿದ್ದೆ. ಈ ನಡುವೆ ಇಳಯರಾಜ ಅವರು ಈ ಸಿನಿಮಾಗೆ ಸಂಗೀತ ನೀಡುತ್ತಿದ್ದಾರೆ ಎಂದು ಗೊತ್ತಾಯಿತು. ಈ ಸಂಗತಿ ಮತ್ತಷ್ಟು ಖುಷಿ ನೀಡಿತು' ಎಂದು ಹುಮ್ಮಸ್ಸಿನಿಂದ ಮಾತನಾಡಿದ್ದಾರೆ.

ಕನ್ನಡ ಸಿನಿಮಾರಂಗದ ಕುರಿತು ಮಾತನಾಡಿರುವ ಅವರು, 'ನಿರ್ದೇಶನದ ವಿಷಯಕ್ಕೆ ಬಂದರೆ ನಮ್ಮ ಮನದ ಭಾಷೆಯಾದ, ಪ್ರಯೋಗವನ್ನು ಮುಕ್ತವಾಗಿ ಮಾಡಬಲ್ಲಂಥ, ಜೊತೆಗೆ ಮಾರುಕಟ್ಟೆಯಲ್ಲಿಯೂ ಯಶ ನೀಡುವಂಥ ಸಿನಿಮಾವನ್ನು ಕನ್ನಡದಲ್ಲಿ ನನಗೆ ಮಾಡಲು ಸಾಧ್ಯ. ಎಂದಿಗೂ ಕನ್ನಡ ನನ್ನ ಮೊದಲ ಆದ್ಯತೆ' ಎಂದಿದ್ದಾರೆ. ■

